# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1402(1586)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸಿ. ಆರ್. ಮನೋಹರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ 2015ನೇ ಸಾಲಿನ ನೇಮಕಾತಿ ಕುರಿತು

(ಅ) 2015ನೇ ಸಾಲಿನಲ್ಲಿ ರಾಜ್ಯದ ವಿವಿಧ ಎಸ್ಕಾಂಗಳಲ್ಲಿ ನೇರ ನೇಮಕಾತಿಯಡಿಯಲ್ಲಿ ಎಷ್ಟು ಸಹಾಯಕ ಇಂಜಿನಿಯರ್ (ವಿ) /(ಕಾ) ಕಿರಿಯ ಇಂಜಿನಿಯರ್ (ವಿ) ಮತ್ತು ಸಹಾಯಕ ಲೆಕ್ಕಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ;

(ಆ) ಈಗಾಗಲೇ ನೇಮಕಾತಿಗೊಂಡಿರುವ ಅಧಿಕಾರಿಗಳ 6 ವರ್ಷ ಸೇವಾ ಅವಧಿ ಪೂರ್ಣಗೊಂಡಿರುವುದರಿಂದ, ದಿ:04-02-2015ರ ಇಂಧನ ಇಲಾಖೆಯ "ನೌಕರರಿಂದ ಸಹಮತ ಪಡೆದು ಕಂಪನಿವಾರು ಮರು ನಿಯೋಜನೆ ಮಾಡುವ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಇನ್ನು ಮುಂದೆ ಹೊಸದಾಗಿ ನೇಮಕಗೊಳ್ಳುವ ಅಧಿಕಾರಿಗಳ/ನೌಕರರಿಗೆ ಬಡ್ತಿ ನೀಡುವ ಅನಿವಾರ್ಯತೆ ಬಂದಾಗ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮ ಮತ್ತು ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು ಪರಸ್ಪರ ಸಮಲೋಚಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು" ಎಂದು ಮಾರ್ಗಸೂಚಿಯನ್ನು ನೀಡಿರುತ್ತಾರೆ ಹಾಗೂ "ಮಾರ್ಗಸೂಚಿಗಳು ಬೆಂಗಳೂರು ವಿದ್ಯುತ್ ಕಂಪನಿಯಲ್ಲಿ ಹೈದ್ರಾಬಾದ್-ಕರ್ನಾಟಕ (371ಜೆ) ಪ್ರದೇಶದ ಅಡಿಯಲ್ಲಿ ನೇಮಕಾತಿಗೆ ಹಾಗೂ ಜೆಸ್ಕಾಂಗೆ ಅನ್ವಯಿಸತಕ್ಕದ್ದಲ್ಲ" ಎಂದು ತಿಳಿಸಿರುವುದರಿಂದ 2015ನೇ ಸಾಲಿನಲ್ಲಿ ನೇರ ನೇಮಕಾತಿಗೊಂಡ ಸಹಾಯಕ ಇಂಜಿನಿಯರ್ (ವಿ)/(ಕಾ) ಕಿರಿಯ ಇಂಜಿನಿಯರ್ (ವಿ) ಮತ್ತು ಸಹಾಯಕ ಲೆಕ್ಕಾಧಿಕಾರಿಗಳ ಬಡ್ತಿ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಹಾಗೂ ಮುಂದಿನ ಕ್ರಿಯಾ ಯೋಜನೆಗಳೇನು?